ಕಾಗದ ತೆರೆದು ನೋಡಿದಳು. ರಾನಾ ಕೈ ಬರಹ. ಎಲ್ಲಿ ನಿಂತು ಬರೆದನೋ ಯಾರಿಗೆ ಗೊತ್ತು? ತರಾತುರಿಯಲ್ಲಿ ಬರೆದ ಹಾಗಿದೆ, ಸ್ಪಷ್ಟವಾಗಿಲ್ಲ.

"ಮೊಂಟಿ ಮನೆಗೆ ಹೋಗೋಕಾಗಲಿಲ್ಲ. ರೈಲ್ವೇ ಲೈನ್ ಹತ್ತಿರ ಪಿಲ್ಟು ಸಿಕ್ಕಿದ. ಬಾಬಾದು ಒಂದು ಫೋಟೊ ಅವನಿಗೆ ಗೊತ್ತಿರೋರ ಕೈಯಲ್ಲಿ ಕೊಟ್ಟಿದ್ದ. ಅವರು ಬರ್ಮಿಂಗ್ ಹ್ಯಾಮ್‌ನಲ್ಲಿದ್ದಾರಂತೆ. ಬಾಬಾ ಅವರಿಗೆ ಗೊತ್ತಂತೆ. ಅಲ್ಲಿ ಬಂಗಾಳಿಗಳ ಹೋಟೆಲ್ಲುಗಳಿವೆಯಂತೆ. ಅಂಥ ಹೋಟೆಲೊಂದರಲ್ಲಿ ಬಾಬಾ ಮ್ಯಾನೇಜರ್ ಅಂತೆ. ಪಿಲ್ಟುಗೆ ಓದೋಕೆ ಇಷ್ಟವಿಲ್ಲ. ನಾನೂ, ಬಾಬಾ ಅಡ್ರೆಸ್ ಸಿಕ್ಕಿರೋದ್ರಿಂದ ಇನ್ನು ತಡಮಾಡಲ್ಲ. ಕಮಲಾಪುರದಿಂದ ಹೊರಡುವ ರೈಲಲ್ಲಿ ನಾವಿಬ್ಬರೂ ಹೊರಟಿದಿವಿ. ಚಾಟ್ಗಾದಲ್ಲಿ ಹಡಗು ಹತ್ತುತ್ತೀವಿ. ಪಿಲ್ಟು ಹೇಳಿದಾನೆ, ಹಡಗಲ್ಲಿ ಆಲೂ, ಈರುಳ್ಳಿ ಕತ್ತರಿಸೋಕೆ ನನ್ನಂಥ ಹುಡುಗರಿಗೆ ಕೆಲಸ ಕೊಡ್ತಾರಂತೆ. ನಾವು ಕೆಲಸ ಮಾಡ್ತೀವಿ. ನೀನು ನನ್ನ ಬಗ್ಗೆ ಯೋಚನೆ ಮಾಡ್ಬೇಡ. ಸರಿಯಾಗಿ ಹೋಗಿ ತಲುಪ್ತೀನಿ. ಪತ್ರ ಬರೀತೀನಿ. ಪ್ಲೀಸ್ ದೀದಿ, ನೀನು ಕೋಪ ಮಾಡ್ಕೋಬೇಡ."

"ಏನಾಯ್ತು? ನಿಮಗೋಸ್ಕರ ಎಷ್ಟು ಹೊತ್ತು ಕಾಯೋದು?" ದಪದಪ ಹೆಜ್ಜೆಯಿಟ್ಟು ಬಂದ ಅಮ್ಮ ದುಮುಗುಡುತ್ತಾ ಬಾಗಿಲಲ್ಲಿ ನಿಂತಳು.

ರಾಕಾ ತನ್ನ ಎಡಭುಜದಿಂದ ಕಣ್ಣು ಒರೆಸಿಕೊಂಡು, ಮೌನವಾಗಿ ಕಾಗದದ ತುಣುಕಿದ್ದ ಬಲಗೈಯನ್ನು ಮುಂದೆ ಚಾಚಿದಳು.

### ರಾಬಿಯಾ ಖಾತುನ್ (1935–2021)

ಬಾಂಗ್ಲಾ ದೇಶದ ಪ್ರಸಿದ್ಧ ಕತೆಗಾರ್ತಿ, ಕಾದಂಬರಿಗಾರ್ತಿ. ಪ್ರಬಂಧ, ಧಾರ್ಮಿಕ ಇತಿಹಾಸ, ಪ್ರವಾಸ ಕಥನಗಳನ್ನೂ ಬರೆದಿದ್ದಾರೆ. ಬಾಂಗ್ಲಾ ಫಿಲ್ಮ್ ಪ್ರಶಸ್ತಿ ಮಂಡಳಿಯ ತೀರ್ಪುಗಾರರು. ಬಾಂಗ್ಲಾ ಸಾಹಿತ್ಯ ಅಕಾಡೆಮಿ ಸದಸ್ಯರೂ ಆಗಿದ್ದರು. ಬಾಂಗ್ಲಾ ದೇಶದ ಅತ್ಯುನ್ನತ ಪ್ರಶಸ್ತಿಗಳಾದ ಏಕುಶೆ ಪದಕ್, ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ರಾಬಿಯಾರ ಕೆಲವು ಕಾದಂಬರಿಗಳು ಸಿನಿಮಾಗಳಾಗಿವೆ. ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿ ಅವರದು ಮುಖ್ಯ ಹೆಸರು.

### ನಾಗಮಣಿ ಎಸ್.ಎನ್.

ಮೂಲತಃ ಮಂಡ್ಯ ಜಿಲ್ಲೆ ಶಿವಾರ ಗ್ರಾಮದವರು; ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕನ್ನಡ ಪ್ರಾಧ್ಯಾಪಕಿಯಾಗಿದ್ದರು. ಶಿಕ್ಷಣ ಕ್ಷೇತ್ರ, ಭಾಷಾ ಬೋಧನೆ, ಮಹಿಳಾ ವಿಷಯಗಳಲ್ಲಿ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ.

### ಸರಸಿಜ್ ರಾಯ್ ಚೌಧುರಿ

ಮೂಲತಃ ಕೋಲ್ಕತ್ತದವರು. ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಬೆಂಗಳೂರಿನಲ್ಲಿರುವ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಅಧ್ಯಯನ ನಡೆಸಿ ಭೌತಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಕನ್ನಡ, ಬಂಗಾಳಿ, ಇಂಗ್ಲಿಷ್ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದಾರೆ.